ಸಾಕ್ಷಿ ಯನ್ನು ದಿಃ 10.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ನನ್ನದು ಬಿ.ಟಿ.ಎಂ ಕೊಪ್ಪಲು ಗ್ರಾಮ.
2. ನನಗೆ 2 ಎಕರೆ ಜಮೀನು ಇದೆ. ನಾನು ಹೊಗೆಸೊಪ್ಪು, ರಾಗಿ, ಅವರೆ, ಮುಂತಾದವು ಬೆಳೆಯುತ್ತೆನೆ. ನನಗೆ ಒಂದು ಬ್ಯಾರನ್ ಇದೆ.
3. ವ್ಯವಸಾಯದ ಖರ್ಚು ವೆಚ್ಚಕ್ಕೆ ಸಾಲ ಮಾಡುತ್ತೀರಾ ಎಂದರೆ, ಅಲ್ಪ ಸ್ವಲ್ಪ ಮಾಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ನನ್ನ ಜಮೀನಿಗೆ ಕೊಳವೆ ಬಾವಿ ಇದೆ. ವರ್ಷಕ್ಕೆ 2 ಬೆಳೆ ಬೆಳೆಯುತ್ತೇನೆ. ತರಕಾರಿಗಳನ್ನು ಬೆಳೆಯುವುದಿಲ್ಲ.
4. ನಾನು ಹಾಗೂ ದೂರುದಾರರು ಒಂದೇ ಸಮುದಾಯದವರು ಎಂದರೆ, ಸರಿಯಲ್ಲ.
5. ದೂರುದಾರರು ಶೆಟ್ಟಿಹಳ್ಳಿ, ಅವರ ಊರಿಗೆ ಹಾಗೂ ನಮ್ಮ ಊರಿಗೆ 7-8 ಕಿ.ಮೀ ಆಗುತ್ತದೆ.
6. ದೂರುದಾರರ ಜೊತೆ ನಾನು ಯಾವುದೇ ವ್ಯವಹಾರ ಮಾಡಿಲ್ಲ.
7. ಹಣದ ವ್ಯವಹಾರ ಮಾಡಬೇಕಾದರೆ ಪ್ರೊನೋಟ್ ಹಾಗೂ ಚೆಕ್ ನೀಡುವ ಅಭ್ಯಾಸ ಇಟ್ಟುಕೊಂಡಿದ್ದೀರಾ ಎಂದರೆ ಸರಿಯಲ್ಲ.
8. ನಾನು ಪಿರಿಯಾಪಟ್ಟಣದ ಅಬ್ಬೂರು ಎಸ್.ಬಿ.ಐ ಬ್ಯಾಂಕಿನಲ್ಲಿ ವ್ಯವಹಾರ ಮಾಡುತ್ತೇನೆ.
9. ಬ್ಯಾಂಕಿನಿಂದ ನಾನು ಚೆಕ್ ಪುಸ್ತಕ ಪಡೆದಿದ್ದೇನೆ.
10. ಸಾಕ್ಷಿಗೆ ಅವರ ವಕಾಲತ್ ತೋರಿಸಿದ್ದು, ಅದರಲ್ಲಿರುವ ಸಹಿ ತನ್ನದಲ್ಲ ಎಂದು ನಿರಾಕರಿಸಿರುತ್ತಾರೆ. ನಿಪಿ - 1 ರ ಚೆಕ್ ಮೇಲಿರುವ ಸಹಿ ನನ್ನದು.
11. ದೂರುದಾರರ ಬಳಿ ನೀವು ಹಣಕಾಸು ವ್ಯವಹಾರ ಮಾಡಿದ್ದು, ಆ ಸಲುವಾಗಿ ನೀವು ನಿಪಿ - 1 ರ ಚೆಕ್ಕನ್ನು ನೀಡಿದ್ದೀರಿ ಎಂದರೆ ಸರಿಯಲ್ಲ, ನಾನು ಅವರಿಗೆ ಯಾವುದೇ ಚೆಕ್ ನೀಡಿಲ್ಲ.
12. ನಿಪಿ - 1 ರ ಚೆಕ್ ನಿಮ್ಮದು ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.
13. ದೂರುದಾರರಿಗೆ ಹಣ ವಾಪಸ್ ನೀಡಬೇಕಾಗತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

14. ನೀವು ನೀಡಿದ ಚೆಕ್ ಬೌನ್ಸ್ ಆದ ಬಗ್ಗೆ ದೂರುದಾರರು ನೊಟೀಸು ನೀಡಿದ್ದರೂ ನೀವು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.
15. ದೂರುದಾರರಿಂದ ನೀವು ಕಾನೂನುಬದ್ಧ ಅವಶ್ಯಕತೆಗಾಗಿ 2 ಲಕ್ಷ ಹಣ ಪಡೆದುಕೊಂಡು ಅದರ ಮರುಪಾವತಿಗೆ ನಿಪಿ - 1ರ ಚೆಕ್ ನೀಡಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ